ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರ: 1828/2014

ಚಾಸಾ:10 ಪ್ರಾಸಾ:8

ದಿನಾಂಕ: 16.07.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಕೆ. ಆರ್ ನಾಯಕ್ |
| ತಂದೆಯ ಹೆಸರು | : | ರಾಮದಾಸ ನಾಯಕ್ |
| ವಯಸ್ಸು | : | 64 ವರ್ಷ |
| ಉದ್ಯೋಗ | : | ನಿವೃತ್ತ ಪಿ ಐ |
| ವಾಸ ಸ್ಥಳ | : | ಹೊನ್ನಾವರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಸ.ಸ.ಅ.ರವರಿಂದ:</u>**

ನಾನು 04-09-2013 ರಿಂದ 08-05-2015ರವರಗೆ ಕೋಟಾ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 08-05-2014 ರಂದು ನಾನು ಸಂಜೆ 5 ಗಂಟೆಗೆ ಠಾಣೆಯಲ್ಲಿ ಇದ್ದಾಗ ಹೆಚ್ ಸಿ 966 ರವರು ಕುಂದಾಪುರ ಸರಕಾರಿ ಆಸ್ಪತ್ರೆಗೆ ಹೋಗಿ ಅಲ್ಲಿ ಉಪಚಾರ ಪಡೆಯುತ್ತಿದ್ದ ಚಾಸಾ-1 ರವರ ಹೇಳಿಕೆಯ ದೂರನ್ನು ಪಡೆದುಕೊಂಡು ನನ್ನ ಸಮಕ್ಷಮ ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿ ಠಾಣಾ ಅಪರಾಧ ಸಂಖ್ಯೆ 116/2014 ರಂತೆ ಪ್ರಕರಣ ದಾಖಲಿಸಿ ಪ್ರ.ವ.ವರದಿ ತಯಾರಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ.

ದಿ: 09-05-2014 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾಸಾ-4 ಮತ್ತು 8 ರವರ ಸಮಕ್ಷಮ ಮಧ್ಯಾಹ್ನ 2 ರಿಂದ 3 ಗಂಟೆಯವರೆಗೂ ಚಾಸಾ-2 ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ತಯಾರಿಸಿರುತ್ತೇನೆ. ಆ ವೇಳೆಗೆ 11 ಅಡಿ ಉದ್ದದ ಶಾಮೀಯಾನಕ್ಕೆ ಬಳಸುವ ರಾಡ್ ನ್ನು ವಶಕ್ಕೆ ಪಡೆದಿರುತ್ತೇನೆ. ನಂತರ ಅದನ್ನು ಸ್ವತ್ತು ಪಟ್ಟಿಗೆ ಅಳವಡಿಸಿರುತ್ತೇನೆ.

ಅದೇ ದಿನ 4ನೇ ಆರೋಪಿಯನ್ನು ದಸ್ತಗಿರಿ ಮಾಡಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಅದೇ ದಿನ ಚಾಸಾ-2, 3 ಮತ್ತು 8 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿಃ 14-05-2014 ರಂದು ಆರೋಪಿತರಾದ ನಾಗು ಪೂಜಾರಿ, ಬಸವ ಪೂಜಾರಿ ಹಾಗೂ ಪ್ರದೀಪ್ ರವರು ಠಾಣೆಗೆ ಹಾಜರಾಗಿದ್ದು ಅವರಿಗೆ ದಸ್ತಗಿರಿ ನಿಯಮ ಪಾಲಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿಃ 23-06-2014 ರಂದು ಈ ಪ್ರಕರಣದಲ್ಲಿ ವಶಕ್ಕೆ ಪಡೆದ 11 ಅಡಿ ಉದ್ದದ ಕಬ್ಬಿಣದ ರಾಡ್ ನ್ನು ವೈದ್ಯಾಧಿಕಾರಿಯವರ ಮುಂದೆ ಹಾಜರುಪಡಿಸಿ ಅದರಿಂದ ಹೊಡೆದರೆ ಚಾಸಾ-1 ರವರಿಗೆ ಆದ ಗಾಯಗಳು ಆಗುವ ಸಾಧ್ಯತೆ ಇರಬಹುದು ಎಂದು ಅಭಿಪ್ರಾಯ ವರದಿಯನ್ನು ನೀಡಲು ಕೋರಿಕೊಂಡಿರುತ್ತೇನೆ.

ದಿಃ 09-07-2014 ರಂದು ಚಾಸಾ-1 ರಿಂದ 3 ರವರ ಚಿಕಿತ್ಸೆಯ ಬಗ್ಗೆ ಕುಂದಾಪುರ ಸರಕಾರಿ ಆಸ್ಪತ್ರೆಯಿಂದ ಗಾಯದ ಪ್ರಮಾಣ ಪತ್ರಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ. ಅದೇ ದಿನ ಆರೋಪಿತರ ವಿರುದ್ದ ಆರೋಪ ಸಾಭೀತಾಗಿದ್ದರಿಂದ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿ ಪ್ರ.ವ.ವರದಿಂಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು, ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-1 ರಿಂದ 7 ರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನು ನಿಪಿ-1(ಬಿ), 2(ಬಿ), 3(ಸಿ), 4(ಬಿ) ರಿಂದ 7(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಮುಮಾ1ನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತರನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ.

<u>**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಬಿ ಆರ್ ಎನ್ ರವರಿಂದಃ**</u>

ಸದ್ರಿ ಪ್ರಕರಣಕ್ಕೆ ಜಾಗದ ಮೇಲಿರುವ ತಕರಾರು ಆಗಿರುತ್ತದೆ. ನಾನು ಕರ್ತವ್ಯದಲ್ಲಿ ಇದ್ದಾಗ ಚಾಸಾ-1 ರಿಂದ 3 ಮತ್ತು ಮಹಾಬಲ ಪೂಜಾರಿರವರ ವಿರುದ್ದ ಒಂದು ಪ್ರಕರಣ ದಾಖಲಾಗಿದೆ ಎಂದರೆ ಸರಿ. ಸಾಕ್ಷಿ ಸದ್ರಿ ಪ್ರಕರಣವನ್ನು ವೇದಾವತಿ-ಎ ಎಸ್ ಐ ಎನ್ನುವವರು ದಾಖಲಿಸಿರುವುದಾಗಿ ನುಡಿಯುತ್ತಾರೆ. ಸಾಕ್ಷಿ ಸದ್ರಿ ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಡಿ-2 ಎಂದು ಗುರುತಿಸಲಾಯಿತು.

ಈ ಪ್ರಕರಣದ ಸಾಕ್ಷಿದಾರರು ಚಾಸಾ-1 ರವರ ಕುಟುಂಬಸ್ಥರು ಎಂದರೆ ಇರಬಹುದು. ಮುಮಾ1 ಶಾಮೀಯಾನದ ರಾಡ್ ಎಂದರೆ ಸರಿ. ಚಿಕಿತ್ಸೆಗೆ ಸಂಬಂಧಿಸಿದ ಹಾಗೂ ಗಾಯಾಳುಗಳ ಪ್ರಮಾಣ ಪತ್ರವನ್ನು ಚಾಸಾ-9 ರವರಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಿಪಿ-5 ರಿಂದ 7 ರಲ್ಲಿ ಆಯುಧ ಕೋಲು ಮತ್ತು ಕಬ್ಬಿಣದ ರಾಡ್ ಎಂದು ಬರೆದಿರುತ್ತದೆ. ಆದರೆ ಮುಮಾ1 ಶಾಮೀಯಾನದ ಪೈಪು ಎಂದರೆ ಸಾಕ್ಷಿ ಮುಮಾ1 ನ್ನು ನೋಡಿ ಅದು ರಾಡ್ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ

ಅದನ್ನು ಶಾಮೀಯಾನದ ಪೈಪು ಎಂದು ಕರೆಯಲಾಗುತ್ತದೆ ಎಂದರೆ ಸರಿಯಲ್ಲ. ಮುಮಾ1 ರ ತೂಕ ಎಷ್ಟು ಎಂದು ತಿಳಿದಿಲ್ಲ. ಆದ್ದರಿಂದ ತಲೆಯ ಮೇಲೆ ಹಲ್ಲೆ ಮಾಡಿದರೆ ತೀವ್ರ ಸ್ವರೂಪದ ಗಾಯಗಳು ಆಗುವ ಸಾಧ್ಯತೆ ಇರಬಹುದು. ಅದನ್ನು 1ನೇ ಆರೋಪಿಯ ವಯಸ್ಸಿನ ಒಬ್ಬ ವ್ಯಕ್ತಿ ಎತ್ತಿ ಹೊಡೆಯಲು ಆಗುವುದಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಅದನ್ನು ಮುಟ್ಟಿಲ್ಲದೆ ಆತನಿಗೆ ಮುಮಾ1ನ್ನು ಎತ್ತುವಂತಹ ಸಾಮಾರ್ಥ್ಯ ಇಲ್ಲ ಎಂದರೆ ಸರಿಯಲ್ಲ. ಚಾಸಾ-9 ರವರು ಗಾಯಾಳುವಿಗೆ ಸಂಪೂರ್ಣವಾದ ಚಿಕಿತ್ಸೆಯನ್ನು ನೀಡಿರುತ್ತಾರೆ ಎಂದರೆ ಸರಿ.

ನಿಪಿ-5 ರಿಂದ 7 ರಲ್ಲಿ ಕಂಡು ಬರುವ ಕೋಲಿನ ಬಗ್ಗೆ ಬೇರೆ ಯಾವುದೇ ವಿಚಾರ ಮಾಡಿಲ್ಲ. ನಿಪಿ-5 ರಲ್ಲಿ ಕಂಡು ಬರುವ ಯಾವುದೇ ಅಭಿಪ್ರಾಯವನ್ನು ವೈದ್ಯರಿಂದ ಪಡೆದಿಲ್ಲ ಎಂದರೆ ಸರಿಯಲ್ಲ. ನಿಡಿ-2 ರಲ್ಲಿ ಕಾಣುವ ಆರೋಪಿತರನ್ನು ದಸ್ತಗಿರಿ ಮಾಡಿರುವ ಬಗ್ಗೆ ಈಗ ನನಗೆ ನೆನಪಿಲ್ಲ. ಸದ್ರಿ ಪ್ರಕರಣದ ಕಡತದ ಬಗ್ಗೆ ನನಗೆ ಈಗ ನೆನಪಿಲ್ಲ. ಆ ಅವಧಿಯಲ್ಲಿ ಠಾಣಾ ಪಿ ಎಸ್ ಐ ನಾನೇ ಆಗಿದ್ದೆ ಎಂದರೆ ಸರಿ. ಯಾವುದೇ ಪ್ರಕರಣದ ಎಲ್ಲಾ ಮಾಹಿತಿಗಳನ್ನು ಸಿಬ್ಬಂದಿಗಳು ನನ್ನ ಗಮನಕ್ಕೆ ತರಬೇಕು ಎಂದರೆ ಸರಿ. ಬಿ ಅಂತಿಮ ವರದಿಯಾದರೂ ನನ್ನ ಗಮನಕ್ಕೆ ತರಬೇಕು ಎಂದರೆ ಸರಿ. ಆ ರೀತಿ ಯಾವುದೇ ಮಾಹಿತಿ ಈಗ ನನಗೆ ನೆನಪಿಲ್ಲ.

ನಿ.ಡಿ-2 ರಲ್ಲಿನ ಆರೋಪಿತರ ಒತ್ತಡಕ್ಕೆ ಮಣಿದು ಅವರ ವಿರುದ್ದ ಯಾವುದೇ ಮುಂದಿನ ಕ್ರಮ ವಹಿಸಿಲ್ಲ ಎಂದರೆ ಸರಿಯಲ್ಲ. ಟಿಪ್ಪರ್ ವಿಚಾರದಲ್ಲಿ ಗಲಾಟೆಯಾಗಿರುವುದು ನನ್ನ ಗಮನಕ್ಕೆ ಬಂದಿದೆ. ಸದ್ರಿ ಟಿಪ್ಪರ್ ಜಾಗಕ್ಕೆ ಹೋಗಲು ನಿರ್ಭಂಧಕ ಆಜ್ಞೆ ಇರುವುದನ್ನು ಹಾಜರುಪಡಿಸಿರುವುದಿಲ್ಲ. ನಿಪಿ-6 ಮತ್ತು 7 ರಲ್ಲಿ ಕಂಡು ಬರುವ ಗಾಯಾಳುಗಳಿಗೆ ಕಣ್ಣಿಗೆ ತೋರುವಂತಹ ಯಾವುದೇ ಗಾಯಗಳು ಕಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ರಕ್ತ ಬರುವಂತಹ ಗಾಯಗಳು ಸದ್ರಿ ಸಾಕ್ಷಿದಾರರಿಗೆ ಆಗಿರುವುದನ್ನು ನಾನು ನೋಡಿಲ್ಲ.

ಚಾಸಾ-1 ರವರಿಗೆ ಆ ವೇಳೆಗೆ 61 ವರ್ಷ. ಯಾವುದೇ ಆಕೆಯ ಮೇಲೆ ಆದ ಹಲ್ಲೆಗೆ ಚಿಕಿತ್ಸೆಯನ್ನು ಪಡೆದಿಲ್ಲದೆ ಅಜಾಗರೂಕತೆಯಿಂದ ಮಾಡಿಕೊಂಡ ಗಾಯಕ್ಕೆ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆಪಾದಿಸಿರುವ ಯಾವುದೇ ಘಟನೆ ಜರುಗಿಲ್ಲದೆ ಆರೋಪಿತರ ಮೇಲಿನ ದ್ವೇಷದಿಂದ ಸಾಕ್ಷಿದಾರರು ಅವರು ವಿರುದ್ದ ಈ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-3 ರಿಂದ 5 ರವರು ಪಂಚನಾಮೆಗೆ ಹಾಜರಾಗದೆ ಮೇಲೆ ಹೇಳಿದಂತೆ ಯಾವುದೇ ಹೇಳಿಕೆಯನ್ನು ನನ್ನ ಸಮಕ್ಷಮ ನೀಡಿಲ್ಲ ಎಂದರೆ ಸರಿಯಲ್ಲ. ಉಳಿದ ಸಾಕ್ಷಿದಾರರು ಚಾಸಾ-1ರವರ ಕುಟುಂಬಸ್ಥರಾದ

ಕಾರಣ ಪ್ರಕರಣಕ್ಕೆ ಅನುಗುಣವಾಗಿ ನನ್ನ ಮುಂದೆ ಸುಳ್ಳು ಮಾಹಿತಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ಮತ್ತು ಕುಟುಂಬದವರು ಆರೋಪಿತರ ಮೇಲೆ ಹಲ್ಲೆ ನಡೆಸಿದ್ದು ಆರೋಪಿತರು ಚಾಸಾ-1 ಮತ್ತು ಕುಟುಂಬದವರ ಮೇಲೆ ಯಾವುದೇ ಹಲ್ಲೆ ಎಸಗಿರುವುದಿಲ್ಲ ಎಂದರೆ ಸರಿಯಲ್ಲ. ಮುಮಾ1 ಅಸಹಜವಾಗಿ ಕಂಡು ಬಂದಿದ್ದು ಅದರಿಂದ ಯಾವುದೇ ಒಬ್ಬ ವ್ಯಕ್ತಿ ಹಲ್ಲೆ ಮಾಡಲು ಸಾಧ್ಯವಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣದ ತೀವ್ರತೆಯನ್ನು ಜಾಸ್ತಿಮಾಡಲು ಶಾಮೀಯಾದ ರಾಡ್ ನ್ನು ಈ ಪ್ರಕರಣದಲ್ಲಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಮೇಲೆ ಗುರುತಿಸಿದ ಎಲ್ಲಾ ದಾಖಲೆಗಳನ್ನು ಠಾಣೆಯಲ್ಲಿ ತಯಾರು ಮಾಡಲಾಗಿದೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ . ದಂ. ಕುಂದಾಪುರ**